**ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,ಹೊಸದುರ್ಗ.**

ಅಸಲು ದಾವಾ ಸಂಖ್ಯೆ.**231/2017**
**ವಾ.ಸಾ-1**

ಸಾಕ್ಷಿಗೆ ದಿನಾಂಕಃ **5-3-2024** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಆರ್ ಕೆ **2** ಮತ್ತು **3** ನೇ ಪ್ರತಿವಾದಿಯರ ಪರ ವಕೀಲರಿಂದ

1. ನನ್ನ ಮತ್ತು 1 ನೇ ಪ್ರತಿವಾದಿಯ ನಡುವೆ ನಡೆದ ದಾವೆಯ ಬಗ್ಗೆ ನನಗೆ ಮಾಹಿತಿ ಇದೆ. ಸದರಿ ದಾವೆಯಲ್ಲಿನ ಆದೇಶದ ಬಗ್ಗೆ ನನಗೆ ತಿಳಿದಿದೆ. ಸದರಿ ದಾವೆ ವಜಾ ಆಗಿದೆ. ಸದರಿ ದಾವೆಯಲ್ಲಿ ಈ ದಾವೆಯಲ್ಲಿನ ಆಸ್ತಿ ಕೂಡ ಸೇರಿತ್ತು. ಈ ದಾವೆಯ ವಾದಪತ್ರದಲ್ಲಿಯೂ ಕೂಡ ಈ ಕುರಿತು ಬರೆಸಿದ್ದೇನೆ ಎಂದರೆ ಸರಿ.

2. 1 ನೇ ಪ್ರತಿವಾದಿ ಸಲ್ಲಿಸಿದ ದಾವೆಯಲ್ಲಿ ಈ ದಾವೆಯ ಆಸ್ತಿ ಸೇರಿಸಿರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಪಹಣಿ ಪತ್ರಿಕೆಗಳು 2 ಮತ್ತು 3 ನೇ ಪ್ರತಿವಾದಿಯರ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ದಾವಾ ಸ್ವತ್ತಿನ ಸ್ವಾಧೀನಾನುಭೋಗದಲ್ಲಿ ಇದ್ದೇನೆ ಎಂದು ನುಡಿಯುವರು. ನಾನು ದಾವಾ ಸ್ವತ್ತಿನ ಸ್ವಾಧೀನಾನುಭೋಗದಲ್ಲಿ ಇಲ್ಲ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರೇ ಸ್ವಾಧೀನಾನುಭೋಗದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

3. ನಿಪಿ-5 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಈ ಕುರಿತು ನಿಪಿ-7 ರಂತೆ ಪ್ರತ್ಯುತ್ತರ  ನೀಡಿದ್ದೇನೆ ಎಂದರೆ ಸರಿ. ಅದರಲ್ಲಿರುವ ವಿಷಯಗಳು ನನಗೆ ತಿಳಿದಿದೆ. ಸಾಕ್ಷಿಯು ಮುಂದುವರೆದು ಪ್ರತ್ಯುತ್ತರ ತುಂಬಾ ಹಳೆಯದು

ಆದ್ದರಿಂದ ನಿಖರವಾಗಿ ಹೇಳಲಾಗುವುದಿಲ್ಲ ಎಂದು ನುಡಿಯುವರು. ನಾನು ನಿಪಿ-7 ರಂತೆ ಸುಳ್ಳು ಪ್ರತ್ಯುತ್ತರ ನೀಡಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ-8 ರಲ್ಲಿ 2 ನೇ ಪ್ರತಿವಾದಿಯನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಅವರ ಗಂಡನನ್ನು ಪಕ್ಷಗಾರರನ್ನಾಗಿ ಮಾಡಲಾಗಿದೆ ಎಂದು ನುಡಿಯುವರು. ದಾವಾ ಆಸ್ತಿ 2 ನೇ ಪ್ರತಿವಾದಿಯ ಹೆಸರಿನಲ್ಲಿ ಇದ್ದರೂ ಕೂಡ ಅವರ ಗಂಡನನ್ನೇ ಪಕ್ಷಗಾರರನ್ನಾಗಿ ಮಾಡಲಾಗಿದೆ. ಈ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-8 ಕ್ಕೆ 2 ನೇ ಪ್ರತಿವಾದಿಯ ಒಪ್ಪಿಗೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ-8 ಕ್ಕೆ 2 ನೇ ಪ್ರತಿವಾದಿ ಸಹಿ ಮಾಡಿಲ್ಲ.

5. ನಿಪಿ-8 ನ್ನು 1 ನೇ ಪ್ರತಿವಾದಿ ಮಾಹಿತಿ ಕೊಟ್ಟು ಬರೆಸಿದ್ದಾರೆ. ನಿಪಿ-8 ರ ಕಾಲಕ್ಕೆ ಹಾಜರಿದ್ದ ಗ್ರಾಮಸ್ಥರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ನಿಪಿ-8 ರ ಕಾಲಕ್ಕೆ ಸುಮಾರು 10-15 ಜನ ಇದ್ದರು. ಸದರಿಯವರೆಲ್ಲರೂ ಕೂಡ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ನಿಪಿ-8 ಕ್ಕೆ ಸುಮಾರು 10-15 ಜನ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಸದರಿ ಸಾಕ್ಷಿದಾರರ ಹೆಸರು ನನಗೆ ಹೇಳಲು ಬರುವುದಿಲ್ಲ. ಸದರಿಯವರು ಕಪ್ಪಗೆರೆ ಗ್ರಾಮಸ್ಥರು.

6. ನಿಪಿ-8 ಕ್ಕೆ ಯಾವೆಲ್ಲಾ ಪಕ್ಷಗಾರರು ಸಹಿ ಮಾಡಿದ್ದಾರೆ ಎಂದು ನೆನಪಿಲ್ಲ. ನಿಪಿ-8 ರಂತೆ ಯಾವೆಲ್ಲಾ ಜಮೀನುಗಳು ಯಾರ ಪಾಲಿಗೆ ಹೋಗಿವೆ ಎಂದು ಸಂಪೂರ್ಣವಾಗಿ ನಿಖರವಾಗಿ ನನಗೆ ಹೇಳಲಾಗುವುದಿಲ್ಲ. ನಿಪಿ-8 ನ್ನು ರಂಗಪ್ಪ ಎಂಬ ಪತ್ರ ಬರಹಗಾರರು ಮಾಡಿದ್ದಾರೆ.

7. ನಿಪಿ-8 ರಲ್ಲಿ ಸಾಕ್ಷಿದಾರರ ಸಹಿ ಆದ ನಂತರ ಪತ್ರ ಬರಹಗಾರರ ಸಹಿಯವರೆಗೆ ಖಾಲಿ ಜಾಗ ಇದೆ ಎಂದರೆ ಸರಿ. ನಿಪಿ-8 ನ್ನು ಕಾಗದದ ಮೇಲೆ ಸಹಿಯನ್ನು ಪಡೆದು ನಂತರ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-8 ನ್ನು ಸೃಷ್ಠಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-8 ಸುಳ್ಳು ದಾಖಲೆಯಾಗಿರುವುದರಿಂದ ಅರದಲ್ಲಿನ ಸಾಕ್ಷಿದಾರರು ಯಾರೆಂದು ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ.

8. ನಿಪಿ-9 ಜಮೀನಿಗೆ ಸಂಬಂಧಿಸಿದ ದಾಖಲಾತಿ. ನಿಪಿ-9 ಕ್ಕೆ ಹನುಮಂತಪ್ಪ, ರಂಗಪ್ಪ, ರಾಜಪ್ಪ ,ಈಶ್ವರಪ್ಪ, ಭೈರಪ್ಪ, ಕಲ್ಲಪ್ಪ ಮತ್ತು ಇತರರು ಸಹಿ ಮಾಡಿದ್ದಾರೆ. ಸದರಿಯವರಾರೂ ಕೂಡ ನಿಪಿ-9 ಕ್ಕೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-9 ನ್ನು ಕೂಡ ಖಾಲಿ ಕಾಗದದ ಮೇಲೆ ಸಹಿ ಪಡೆದು ಸೃಷ್ಠಿಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

9. ನಿಪಿ-9 ನ್ನು 1 ನೇ ಪ್ರತಿವಾದಿಯ ಹೇಳಿಕೆಯಂತೆ ಬರೆಯಲಾಗಿದೆ. ನಿಪಿ-9 ನ್ನು 1 ನೇ ಪ್ರತಿವಾದಿ ಹೇಳಿದಂತೆ ಬರೆಯಲಾಗಿದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಿಪಿ-9 ನ್ನು ಕೂಡ ರಂಗಪ್ಪ ಎಂಬುವವರು ಮಾಡಿದ್ದಾರೆ. ನಿಪಿ-9 ನ್ನು ಕೂಡ ಸೃಷ್ಠಿಮಾಡಿರುವುದರಿಂದ ಅದರಲ್ಲಿನ ಮಾಹಿತಿಗಳು ನಿಖರವಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ.

10. ನಿಪಿ-10 ನ್ನು ಕೂಡ ಸೃಷ್ಠಿ ಮಾಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದಂತೆ 1 ನೇ ದಾವಾಯಲ್ಲಿ ಯಾವುದೇ ತೀರ್ಮಾನ ಆಗಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ನನಗೆ ಯಾವುದೇ ಪರಿಹಾರ ಪಡೆಯಲು ಅವಕಾಶ ಇಲ್ಲ ಎಂದರೆ ಸರಿಯಲ್ಲ.

12. ಸರ್ವೆ ನಂ.140/1 ನನ್ನ ತಾಯಿ ಹೆಸರಿಗೆ ಬಂದಿತ್ತು. ಈಗ 1 ನೇ ಪ್ರತಿವಾದಿಯ ಪಾಲಿಗೆ ಹೋಗಿದೆ. ಸದರಿ ಸ್ವತ್ತನ್ನು 1 ನೇ ಪ್ರತಿವಾದಿ ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

13. ದಿನಾಂಕ 26-10-2015 ರ ಕ್ರಯಪತ್ರಕ್ಕೆ ನಾನು ಮತ್ತು ನನ್ನ ಮಕ್ಕಳು ಸಹಿ ಮಾಡಿದ್ದೇವೆ. ಸರ್ವೆ ನಂ.140/1 ನನ್ನ ತಾಯಿಯ ತವರು ಮನೆ ಆಸ್ತಿ ಎಂದರೆ ಸರಿ. ಸದರಿ ಜಮೀನಿನಲ್ಲಿ 1 ಎಕರೆ ನನ್ನ ತಾಯಿಗೆ ಬಂದಿತ್ತು ಎಂದರೆ ಸರಿ. ಸದರಿ ಜಮೀನನ್ನು 1 ನೇ ಪ್ರತಿವಾದಿಯು ಯಾರಿಗೆ ಮಾರಾಟ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ನನ್ನನ್ನು ಕರೆಯಿಸಿ ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿದ್ದೇನೆ. ಖರೀದಿ ಪತ್ರಕ್ಕೆ ಪರಮೇಶ್ವರಪ್ಪ ಸಹಿ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಕುರಿತು ನಾನು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯು ನಾನು ಹೇಳುವಂತೆ ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ ಎಂದರೆ ಸರಿಯಲ್ಲ.

14. ನನಗೆ ಕನ್ನಡ ಓದು ಮತ್ತು ಬರೆಯಲು ಬರುತ್ತದೆ. ಸಾಮಾನ್ಯವಾಗಿ ದಾಖಲಾತಿಗಳನ್ನು ಓದಿ ಸಹಿ ಮಾಡುತ್ತೇನೆ. ಖರೀದಿ ಪತ್ರದ ನೋಂದಣಿ ಕಾಲಕ್ಕೆ ಖರೀದಿ ಪತ್ರದಲ್ಲಿನ ವಿಷಯಗಳನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಈ ಹಂತದಲ್ಲಿ ಸಾಕ್ಷಿಗೆ ಖರೀದಿ ಪತ್ರವನ್ನು ತೋರಿಸಿ ಓದಲು ಬರುತ್ತದಾ ಎಂದು ಪ್ರಶ್ನಿಸಿದಾಗ ಸರಿಯಾಗಿ ಓದಲು ಬರುವುದಿಲ್ಲ ಎಂದು ಉತ್ತರಿಸುವರು. ಸರಿಯಾಗಿ ಓದಲು ಬರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

**ಅಸಲು ದಾವಾ ಸಂಖ್ಯೆ.231/2017**
**ವಾ.ಸಾ-1**

15. ಸದರಿ ಖರೀದಿ ಪತ್ರದಂತೆ ಸರ್ವೆ ನಂ.140/1 ನಾನು ಮತ್ತು ನನ್ನ ಮಕ್ಕಳು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಕಾಲಕ್ಕೆ ನ್ಯಾಯಾಲಯದಲ್ಲಿ ದಾವೆಯು ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. ದಾವೆ ವಿಚಾರಣಾ ಹಂತದಲ್ಲಿ ಇದ್ದರೂ ಕೂಡ ಉದ್ದೇಶ ಪೂರ್ವಕವಾಗಿ ನಾನು ಮತ್ತು ನನ್ನ ಹೆಂಡತಿ ಮಕ್ಕಳು ಆಸ್ತಿಯನ್ನು ಮಾರಾಟ ಮಾಡಿದ್ದೇವೆ ಎಂದರೆ ಸರಿಯಲ್ಲ. ಖರೀದಿ ಪತ್ರಕ್ಕೆ 1ನೇ ಪ್ರತಿವಾದಿಯ ಸಹಿ ಇರುವ ಬಗ್ಗೆ ನನಗೆ ಗೊತ್ತಿಲ್ಲ. ಖರೀದಿ ಪತ್ರದಲ್ಲಿ ನನ್ನ ಮತ್ತು ನನ್ನ ಹೆಂಡತಿ ಮಕ್ಕಳ ಭಾವಚಿತ್ರ ಇದೆ.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಅದೆ. ನನ್ನ ಸಮಕ್ಷಮ

**ಪ್ರಧಾನ ಸಿವ್ಹಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.**